ಅರೆಕ್ಷಣ ಅವಳೇನು ಹೇಳುತ್ತಿದ್ದಾಳೋ ಅರ್ಥವಾಗದೆ ಮಿಕಿ ಮಿಕಿ ನೋಡಿದೆ. ಅವಳು ಮಾತು ಮುಂದುವರೆಸಿದಳು.

“ಕೆಲವೊಮ್ಮೆ ಯಾವುದೋ ಕಾಣದ ನದಿಯ ಹುಡುಕಿ ಹೋಗುವ ನಾವು ನಮ್ಮದೇ ಎದೆಯೊಳಗಿನ ಕಡಲಿಗೆ ಕುರುಡರಾಗಿರುತ್ತೇವೆ. ನಿಜ ಶರತ್... ಅಮ್ಮ ಬಾಯ್ಬಿಟ್ಟು ಹೇಳುವ ತನಕ ನನಗೆ ಈ ವಿಷಯ ಗೊತ್ತೇ ಇರಲಿಲ್ಲ. ಗೊತ್ತಾಗುವುದಾದರೂ ಹೇಗೆ ಹೇಳು? ನಾಲ್ಕನೇ ತರಗತಿಗೇ ಮನೆ ತೊರೆದು ಚಿಕ್ಕಮ್ಮನ ಮನೆ ಸೇರಿಕೊಂಡೆ. ಆ ಬಳಿಕ ಲೇಡೀಸ್ ಕಾಲೇಜ್. ಅನಂತರ ಲೇಡೀಸ್ ಹಾಸ್ಟೆಲ್. ಅದಾದ ಮೇಲೆ ಜಾಬ್... ಹೀಗೆ ಒಂದಿಲ್ಲೊಂದು ರೀತಿಯಲ್ಲಿ ಮನೆಯ ತಳಮಳಗಳಿಗೆ ಅಪರಿಚಿತಳಾಗಿದ್ದುಕೊಂಡೇ ಇಷ್ಟು ದೂರ ಬಂದುಬಿಟ್ಟೆ. ಇನ್ನೊಂದರ್ಥದಲ್ಲಿ ಅಪ್ಪನ ಈ ವಿಕಾರ, ಮನೆಯ ಅಶಾಂತಿಗಳು ತಿಳಿಯಬಾರದೆಂದೇ ಅಮ್ಮ ನನ್ನನ್ನು ದೂರ ಇಟ್ಟಿದ್ದಳು.” ಈ ಸಾರಿ ನನಗೆ ತಡೆಯಲಾಗಲಿಲ್ಲ. ಅದೇನು ಹೇಳಬೇಕೆಂದಿದ್ದೀಯೋ ನೇರವಾಗಿ ಹೇಳಬಾರದೇ ಎಂದೆ.

“ಅಪ್ಪನಿಗೆ ಬಿಪಿ ಬಂದಿದ್ದು ಹೇಗೆ ಎಂಬುದಕ್ಕೆ ಎಲ್ಲಾ ಕಾರಣಗಳನ್ನೂ ತಡಕಾಡಿದೆವು... ಒಂದನ್ನು ಬಿಟ್ಟು. ಅದು ಅವರ ಮನಃಸ್ಥಿತಿ. ಇಲ್ಲ ಶರತ್, ನಾವು, ಅಂದರೆ ಹೊರಜಗತ್ತಿನವರು ನೋಡುತ್ತಿದ್ದ ಅಪ್ಪನೇ ಬೇರೆ, ಅಮ್ಮ ನೋಡುತ್ತಿದ್ದ ಅಪ್ಪನೇ ಬೇರೆ. ನನ್ನ ಪಾಲಿಗೆ ಮಮತೆಯ ಮೂರ್ತಿಯಾಗಿದ್ದ, ಸಮಾಜಕ್ಕೆ ಶಾಂತ ನಾರಾಯಣನಾಗಿದ್ದ ಅಪ್ಪ ಅಮ್ಮನ ಪಾಲಿಗೆ ಅಕ್ಷರಶಃ ಬೇಲಿಯಾಗಿದ್ದ! ಹೌದು... ಅವನು ಅಮ್ಮನನ್ನು ಪ್ರತೀಕ್ಷಣ ನಿರ್ಬಂಧಿಸುತ್ತಿದ್ದ. ಕಟ್ಟಿಹಾಕುತ್ತಿದ್ದ. ಅವಳ ಒಂದೊಂದು ಚಲನೆಗೂ ಹದ್ದಿನ ಕಣ್ಣಿಟ್ಟು ಕಾಯುತ್ತಿದ್ದ. ಅವಳ ವಿಷಯದಲ್ಲಿ ಅದೇನೋ ಒಂದು ತೆರನಾದ ಅಭದ್ರತೆ ಅವನಿಗೆ. ಹಾಗಂತ ಅದು ಅವಳ ಮೇಲಿನ ಅನುಮಾನವಾಗಿರಲಿಲ್ಲ, ತನ್ನದೇ ಮೇಲಿನ ಕೀಳರಿಮೆಯಾಗಿತ್ತು. ಸಮಾಜದಲ್ಲಿ ಸರಿಕರೊಂದಿಗೆ ಸಮಾನವಾಗಿ ಬೆರೆಯಲಾಗದ, ಶ್ರೀಮಂತಿಕೆಯಲ್ಲಿ ನೆರೆಯವರಿಗೆ ಸಮಾನವಾಗಿ ತೂಗಲಾಗದ, ಮಾತಿನಲ್ಲಿ ಏನನ್ನೂ ಹೇಳಲಾಗದ, ನಾಲ್ಕು ಜನರೆದುರು ಧೈರ್ಯವಾಗಿ ಮಾತನಾಡಿ ಏನನ್ನೂ ಸಾಧಿಸಲು ಬಾರದ ಅವನನ್ನು ಅಭದ್ರತೆ ಭಯಾನಕವಾಗಿ ಕಾಡುತ್ತಿತ್ತು. ಎಲ್ಲಿ ತನ್ನ ಹೆಂಡತಿ ತನ್ನನ್ನು ಬಿಟ್ಟು ಹೋಗುವಳೋ ಎಂದು! ಎಲ್ಲಿ ಅವಳಿಗೆ ಇನ್ಯಾರೋ ಹತ್ತಿರವಾಗುತ್ತಾರೋ ಎಂದು! ನೀನು ನಂಬಲಿಕ್ಕಿಲ್ಲ ಶರತ್. ನೀನೇನು, ಅಮ್ಮ ಹೇಳಿದಾಗ ನಾನೇ ನಂಬಲಿಲ್ಲ. ಪಾಪ ಅಮ್ಮ, ಯಾರಿಗೆ ಹೇಳಲೂ ಆಗದೇ, ತಾಳಲೂ ಆಗದೆ ಅಖಂಡ ಇಪ್ಪತ್ತೈದು ವರ್ಷಗಳನ್ನು ನೋವಿನ ಪಾಲಾಗಿ ಕಳೆದುಬಿಟ್ಟಳು.”

ದೂರ ದಿಗಂತದಲ್ಲಿ ನಿರಾಶ್ರಿತರಂತೆ ತೇಲಿ ಹೋಗುತ್ತಿದ್ದ ಮೋಡಗಳನ್ನೇ ನೋಡುತ್ತಾ ಮಾತು ಮುಂದುವರೆಸಿದಳು ಮಂದಾ.

“ನನಗೀಗ ಇಪ್ಪತ್ನಾಲ್ಕು ವರ್ಷ ಶರತ್. ಅಂದರೆ, ಕಳೆದ ಇಪ್ಪತ್ತೈದು ವರ್ಷಗಳಿಂದ ಅಪ್ಪ ಇಂಥಾದ್ದೊಂದು ಕಾಯಿಲೆಯಿಂದ ನರಳುತ್ತಿದ್ದಾನೆ! ಸಣ್ಣದಕ್ಕೂ ಜಗಳವಾಡುತ್ತಾ, ಅಮ್ಮನ ಪ್ರತಿ ನಡೆಯನ್ನೂ ಅನಗತ್ಯವಾಗಿ ವಿಶ್ಲೇಷಿಸುತ್ತಾ, ಅವಳ ಪ್ರತಿಯೊಂದು ದಾರಿಗೂ ಉಣಗೋಲು ನೆಡುತ್ತಾ, ಅಲ್ಲಿ ಎದುರಾಗುವ ಪ್ರತಿಯೊಬ್ಬ ಆಗುಂತಕನನ್ನೂ ತನ್ನ ಅರ್ಥಹೀನ ಕಲ್ಪನೆಗಳೊಳಕ್ಕೆ ಎಳೆದುಕೊಳ್ಳುತ್ತಾ... ಅಕ್ಷರಶಃ ನರಕವೊಂದನ್ನು ಅಮ್ಮನ ಪಾಲಿಗೆ ಸೃಷ್ಟಿಸಿಬಿಟ್ಟ. ತನಗೂ ನಿರ್ಮಿಸಿಕೊಂಡ. ಅವನ ಮನೋವೇದನೆ ಅದೆಷ್ಟು ಉಚ್ಛ ಮಟ್ಟದಲ್ಲಿರುತ್ತಿತ್ತೆಂದರೆ, ಅಂತಹ ಗುಮಾನಿಯ ಕ್ಷಣಗಳಲ್ಲಿ ಅವನ ದೇಹ ಕಂಪಿಸುತ್ತಿತ್ತಂತೆ. ಈ ಕ್ಷಣದ ತನಕ ಇದ್ದ ನಾರಾಯಣನೇ ಬೇರೆ, ಇವನೇ ಬೇರೆ ಎಂಬಂತೆ ವರ್ತಿಸುತ್ತಿದ್ದನಂತೆ! ಏನೂ ಆಗದ ಸಮಯದಲ್ಲೂ ಏನನ್ನೋ ಆಳವಾಗಿ ಚಿಂತಿಸುತ್ತಾ ಕುಳಿತುಬಿಡುತ್ತಿದ್ದನಂತೆ. ಒಂದು ದಿನ ಹೀಗೆ ಅಮ್ಮನೊಡನೆ ಜಗಳಾಡುತ್ತಲೇ ಅಕ್ಷರಶಃ ಕೋಪ ಏರಿ ಬಿದ್ದೇಬಿಟ್ಟಿದ್ದನಂತೆ! ಹೀಗೆ, ಈ ಪರಿಯ ಒತ್ತಡವನ್ನು ಸಹಿಸಿಕೊಳ್ಳಲಾಗದ